Regd No. M.1299, SATYAVADI nded Fou'|1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 30 ಸಂಚಿಕೆ 96] ಶನಿವಾರ 7—12—46 [ಬಿಡಿ ಪ್ರತಿ 3 ಪೈ

ಕಾಂಗ್ರೆಸ್ ಮುಸಲ್ಮಾನರೂ ಕಾಂಗ್ರೆಸ್ ಬಿಡುವರೇ ?

ನವದೆಹಲಿ ಡಿ 5 — 'ಸರ್ದಾರ್' ಪಟೇಲರನವರ ಭಾಷಣಗಳಿಂದ ಶಾಂತಿಗೆ ಚ್ಯುತಿ ಬಂದಿದೆ. ಭಾಷಣ ಚಳುವಳಿಯಿಂದ ಪಟೇಲರು ಶಾಂತಿ ಸಂಧಾನಕ್ಕೆ ಧಕ್ಕೆ ತರುತ್ತಿದ್ದಾರೆ ಲಂಡನ್ ಸಮ್ಮೇಳನಕ್ಕೂ ಇದರಿಂದ ಅಘಾತವಾಗುತ್ತದೆ. ಈ ಭಾಷಣಗಳಿಂದ ಶಾಂಗ್ರೆಸಿನಲ್ಲಿರುವ ಅಲ್ಪ ಸ್ವಲ್ಪ ಮುಸ್ಲಿಂರು ಕಾಂಗ್ರೆಸನ್ನು ಬಿಡುವಂತಾಗುವುದು' ಎಂಬ ಹೇಳಿಕೆಯನ್ನು ಕೇಂದ್ರ ಸರ್ಕಾರದ ನಿರ್ದಾರ' ಅಬ್ದುಲ್ ನಿಶ್ತಾರ್ ಕೊಟ್ಟಿರುವರು.

ಅಮೇರಿಕಾಕ್ಕೆ ಭಾರತ ರಾಯಭಾರಿ

ನವದೆಹಲಿ ಡಿ 6 — ಕೇಂದ್ರ ಶಾಸ್ತ್ರಾಲಿಕ ಸರ್ಕಾರದ ಸದಸ್ಯ ಶ್ರೀ ಆಸಫ್ ಆಲಿಯವರನ್ನು ಸಂಯುಕ್ತ ಸಂಸ್ಥಾನದ ಭಾರತದ ಪ್ರಥಮ ರಾಯಭಾರಿಯನ್ನಾಗಿ ನೇಮಿಸಲಾಗಿದೆ.

ವೈಸ್ರಾಯರೇನೂ ಬರಬೇಕಿಲ್ಲ

ನವದೆಹಲಿ ಡಿ 6 — ರಾಜ್ಯಾಂಗ ನಿರ್ಮಾಣ ಸಭೆಯಲ್ಲಿ ವೈಸ್ರಾಯರು ಅಥವಾ ಅವರ ಪ್ರತಿನಿಧಿ ಭಾಗವಹಿಸುವುದು ಆವಶ್ಯಕವಿಲ್ಲವೆಂದು ತಿಳಿಸಲಾಗಿದೆ.

ಬಂಗಾಳಾ ಹಿಂದೂ ನಿಧಿ

ಶ್ರೀ ದ್ವಾರಕಾ ಜಗದ್ಗುರುಗಳವರು ರೂ. 1001, ಸಿದ್ಧವುರದ ಊರಿನವರಿಂದ ರೂ. 4500 ಕೂಡಿಟ್ಟ ಈಗ ರೂ. 5500 ನ್ನು ಆತಂಕ 'ಪನ್ಜಾಬ್' ದ ಮುಖಾಂತರ ಬಂಗಾಳಾಕ್ಕೆ ಕಳಿಸಲಾಗಿದೆ. ಇನ್ನೂ ಈ ನಿಧಿ ಸಂಗ್ರಹ ಕಾರ್ಯವು ಬಿರುಸಿನಿಂದ ನಡೆಯುತ್ತಿದೆ. ಈ ರೀತಿಯು ಶ್ರೀ ಶ್ರೀಗಳವರ ಸ್ಮೃತ್ಯ ಕಾರ್ಯಕ್ಕಾಗಿ ಹಿಂದೂಸ್ಥಾನದ ಎಲ್ಲಾ ಕಡೆಗಳಿಂದ ಪ್ರಶಂಸಿಸಿ ಕಾಗದಗಳು ಬರುತ್ತಿವೆ.

ಪತ್ರಿಕೋದ್ಯೋಗಿಯ ಮೇಲೆ ಮೊಕದ್ದಮೆ

ತುರುನೇಕೆರೆ ತಾಲ್ಲೂಕು ಆಹಾರ ಪರಿಸ್ಥಿತಿಯ ಬಗ್ಗೆ ಜನವಾಣಿ ಪತ್ರಿಕೆಯು ಸಂಪಾದಕೀಯೊಂದರಲ್ಲಿ ಮಾಯಸಂದ್ರದ ಪತ್ರಿಕೋದ್ಯೋಗಿ ಶ್ರೀ ಶ್ರೀಕಂಠಯ್ಯನವರು ಪ್ರಕಟಿಸಿದ ಲೇಖನದ ಮೇಲೆ ಪೊಲೀಸಿನವರು ಅಕ್ಷೇಪಣೆ ತೆಗೆದುಕೊಂಡು ಭಾರತ ರಕ್ಷಣಾ ಶಾಸನದ ಪ್ರಕಾರ ಸದರಿ ಶ್ರೀಕಂಠಯ್ಯನವರ ಮೇಲೆ ತುಮಕೂರು ಮ್ಯಾಜಿಸ್ಟ್ರೇಟು ಕೋರ್ಟಿನಲ್ಲಿ ಮೊಖದ್ದಮೆ ಹೂಡಿರುವುದಾಗಿ ತಿಳಿಯಬಂದಿದೆ.

ದಕ್ಷತೆಯ ಚಿಹ್ನೆ

ಹಾಸನದ ಜಿಲ್ಲೆಯ ಶ್ರೀ ಗುಂಡು ರಾಮಯ್ಯನವರ ಪುತ್ರ ಕಳೆದ ಫೆಬ್ರವರಿ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತಿದ್ದ ; ಫೇಲಾಯಿತೆಂದೂ. ಇತ್ತೀಚೆಗೆ ಅದೇ ವಿದ್ಯಾರ್ಥಿ ಮೊದಲನೆ ತರಗತಿಯಲ್ಲಿ ಉತ್ತೀರ್ಣನಾಗಿರುವನೆಂದು ಸಾಬೀದ್ದಾರೆ. (ಪಾ)

ಆಸ್ಟ್ರೇಲಿಯಾ ಹೇಳುವುದೇನು ?

ಕ್ಯಾನ್ಬೆರಾ ಡಿ. 5 — ಇಂಡೋನೇಷಿಯನ್ನರಿಗೆ ಮಿತ್ರರೂ ನಾವಲ್ಲ, ಶತ್ರುಗಳೂ ನಾವಲ್ಲ — ಎಂಬುದಾಗಿ ಆಸ್ಟ್ರೇಲಿಯಾ ವಾರ್ತಾ ಮಂತ್ರಿ ಹೇಳಿದ್ದಾರೆ.

ಲಂಡನ್ ಸಮ್ಮೇಳನ ವಿಫಲ

ಲಂಡನ್ ಡಿ 6 — ಲಂಡನ್ ಪರಿಷತ್ತು ನಿಷ್ಫಲ ಎಂದು ನ್ಯೂಯಾರ್ಕ್ ಟೈಮ್ಸ್ ವರದಿಯನ್ನು ಮಾಡಿದೆ. ದೆಹಲಿಗೆ ಸೇರಿದ ನಂತರ ಮಿ|| ಜಿನ್ನಾ ಲೀಗ್ ಕೌನ್ಸಿಲ್ ಸೇರಿಸಿ ಘಟನಾ ಸಮಿತಿ ಬಗ್ಗೆ ಚರ್ಚಿಸುವುದಾಗಿ ಅದೇ ಪತ್ರಿಕೆ ಪ್ರಕಟಿಸಿದೆ.

ಮೈಸೂರು ಕಾಂಗ್ರೆಸ್ ಆಧ್ಯಕ್ಷರ ಅಭಿಪ್ರಾಯ

ಸಂಸ್ಥಾನದಲ್ಲಿ ಕೆಲ ಸ್ವಾರ್ಥಿಗಳು ಬ್ರಾಹ್ಮಣ ಬ್ರಾಹ್ಮಣೇತರರಲ್ಲಿ ಭೇದ ಕಲ್ಪಿಸಲೂ ಮತ್ತು ಕಾಂಗ್ರೆಸ್ಸಿನವರು ಮಂತ್ರಿ ಪದವಿ ಪಡೆಯಲು ಆಶಿಸುತ್ತಿರುವರೆಂದು ಹೇಳುತ್ತಿರುವರೆಂದೂ ಇದು ಸಾಧ್ಯವಲ್ಲವೆಂದೂ ಜನರೆಲ್ಲ ಒಗ್ಗಟ್ಟಿನಿಂದ ಸೌಹಾರ್ದದಿಂದ ಬಾಳಬೇಕೆಂದೂ ಕಾಂಗ್ರೆಸ್ಸು ಮೈಸೂರಿನ 73 ಲಕ್ಷ ಪ್ರಜೆಗಳಿಗೂ ಸುಖ ಶಾಂತಿ ದೊರೆಯಲು ಸಾಧಿಸುವುದೆಂದೂ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹಂಗಲರಾಯರೆಡ್ಡಿಯವರು ಅಭಿಪ್ರಾಯ ಪಟ್ಟಿದ್ದಾರೆ.

ರಾಜೀನಾಮೆ

ಮೈಸೂರು ಡಿ 7 — ಗೌರ್ನಮೆಂಟ್ ಇಂಟರ್‌ಮೀಡಿಯೇಟ್ ಕಾಲೇಜ್ ಸಂಘದ ಜನರಾಯಿಜ ಕಾರ್ಯದರ್ಶಿ ಉಪಾಧ್ಯಕ್ಷ ಮತ್ತು ವ್ಯವಸ್ಥಾಪಕ ಪರಿಷತ್ತಿ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ರಾಜೀನಾಮೆಯಿತ್ತಿರುವುದಾಗಿ ತಿಳಿಯಬಂದಿದೆ.

ರಾಜೀನಾಮೆ ಕೊಡುವ ಬಗ್ಗೆ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಬಂದು ಸಭೆ ನಡೆಯಿತೆಂದು ತಿಳಿಯಬಂದಿದೆ.

ಸಂಘದಲ್ಲಿ ಜನರಾಯಿತಿಕವಾದವಂಗೆ ಆಡಳಿತದಲ್ಲಿ ಯಾವ ಪಕ್ಷ ಇಲ್ಲದಿರುವುದೇ ಈ ರಾಜೀನಾಮೆಗಳಿಗೆ ಕಾರಣವೆಂದು ಗೊತ್ತಾಗಿದೆ.

ಇಡೀ ಕಾಲೇಜ್ ವಿದ್ಯಾರ್ಥಿಗಳು ಬೇರೆ ಸಂಘವನ್ನು ಸ್ಥಾಪಿಸಿ 'ವಂದೇ ಮಾತರಂ' ಗೀತೆಯನ್ನು ಹಾಡಲು ಪ್ರಯತ್ನಿಸುತ್ತಿರುವುದಾಗಿ ತಿಳಿಯಬಂದಿದೆ.

ಡಿಸೆಂಬರ್ 9

9 ನೇ ತಾರೀಖಿನ ದಿವಸ ಬೆಂಗಳೂರಿನಲ್ಲಿ ಮೈಸೂರು ಸಂಸ್ಥಾನದ ಡಿಸೆಂಬರ್ ಅಧಿವೇಶನವು ಪ್ರಾರಂಭವಾಗುವುದು. ಅನೇಕ ಪ್ರಮುಖ ವಿಷಯುಗಳು ಚರ್ಚೆಗೆ ಬರಲಿವೆ.

9 ನೇ ತಾರೀಖಿನ ದಿನದ ಡೆಲ್ಲಿಯಲ್ಲಿ ರಾಜ್ಯಾಂಗ ರಚನಾ ಸಭೆಯು ಪ್ರಾರಂಭವಾಗುವುದು. ಈ ಸಭೆಯನ್ನು ಮುಂದೂಡಲೆಂಬ ಎಲ್ಲ ಪ್ರಯತ್ನವೂ ಸಾಗಲಿಲ್ಲ. ಲಂಡನ್ನಿನಿಂದ ಪಂ|| ನೆಹರೂರವರು ಈ ಸಭೆಗಾಗಿಯೇ ಹೊಸ ನಾಳೆ ಸುಜೆ ಭಾರತಕ್ಕೆ ತಲಪುತ್ತಾರೆ.

ಮೊದಲದಂ

ಅನೇಕ ಕಡೆಗಳಲ್ಲಿ ಮೊಹರಂ ಶಾಂತಿಯಿಂದ ನಡೆಯಿತೆಂದೂ ತಿಳಿಯಬಂದಿದೆ.

ಪೂನಾದಲ್ಲಿ ಕರ್ಫ್ಯೂ ಆಜ್ಞೆ ಜಾರಿಗಾಗಿದ್ದ ಅದನ್ನು 57 ಮಂದಿ ಉಲ್ಲಂಘಿಸಿದ್ದಕ್ಕೆ ಅವರುಗಳನ್ನು ಬಂಧಿಸಿ ಮೂಡಲ್ಪಟ್ಟರು.

ಕಲ್ಕತ್ತಾದಲ್ಲಿ ಹೊಡೆದಾಟವಾಗಿ ಪೋಲೀಸರು ಗುಂಡು ಹಾರಿಸಿದರು.

ಕಾಂಗ್ರೆಸ್ಸಿಗೆ ವಿಜಯ

ಅಜ್ಜಂಪುರದ ಮುನಿಸಿಪಲ್ ಕೌನ್ಸಿಲ್ಲಿನ ಚುನಾವಣೆಯಲ್ಲಿ 8 ಜನ ಕಾಂಗ್ರೆಸ್ಸಿಗರು ಸ್ಪರ್ಧಿಸಿದ್ದರು ಎಲ್ಲರು ಚುನಾಯಿತರಾದರು.

ಡಾವೇಜರ್ ಮಹಾರಾಣಿಯವರು

ಡವೇಜರ್ ಮಹಾರಾಣಿ ಶ್ರೀ ಲಕ್ಷ್ಮಿ ವಿಲಾಸ ಸನ್ನಿಧಾನದವರು ಬೆಂಗಳೂರಿಗೆ ದಯಮಾಡಿಸಿದ್ದಾರೆ.

ಆಕಾಶವಾಣಿಗೆ ಹೊಸ ಹುದ್ದೇದಾರರು

ಮೈಸೂರು ಆಕಾಶವಾಣಿ ರೇಡಿಯೊ ಸ್ಟೇಷನ್ನಿಗೆ ಅಸಿಸ್ಟೆಂಟು ಡೈರೆಕ್ಟರಾಗಿ ಡಾ|| ಎ ಎಂ ನಟೇಶ ಮೊದಲಿಯಾರ ರವರು ನೇಮಿಸಲ್ಪಟ್ಟಿರುವುದಾಗಿ ತಿಳಿಯಬಂದಿದೆ.



ಅಮೇರಿಕಾ ವಾರ್ತೆ

(ಯು. ಎಸ್. ಐ. ಎಸ್.)

ವಾಷಿಂಗ್ಟನ್, ಡಿ 3 — ಭಾರತ ನಾಯಕರಿಗೂ ಮತ್ತು ಬ್ರಿಟಿಷ್ ಪ್ರಭುತ್ವಕ್ಕೂ ನಡೆಯುತ್ತಿರುವ ಲಂಡನ್ ಸಂಧಾನ ಪಾಯತ್ತು ಭದ್ರವಾದ ಮತ್ತು ಶಾಂತಿಯುತವಾದ ಭಾರತದ ಸ್ಥಾಪನೆಯಲ್ಲಿ ಪರಿಣಮಿಸಲೆಂದು ಅಮೇರಿಕಾ ಸೆಕ್ರಟರಿ ಆಫ್ ಸ್ಟೇಟ್ ಡೀನ್ ಆಕೇಸನ್ನರು ಕೋರಿರುವರು.

ವಾಷಿಂಗ್ಟನ್ — ನವೆಂಬರ್ ತಾ|| 23 ಕ್ಕೆ ಆಗುವ ವಾರದಲ್ಲಿ ವ್ಯಾಪ್ತಿ ಕಲ್ಲಿದ್ದಲು ತಯಾರಿಕೆಯು 6400000 ಟನ್ನುಗಳಿಗೆ ಇಳಿಯಿತೆಂದೂ ಅದರ ಹಿಂದಿನ ವಾರದಲ್ಲಿ 12500000 ಟನ್ನುಗಳಾಗಿದ್ದವೆಂದೂ ಪ್ರಕಟವಾಗಿದೆ.

ವಾಷಿಂಗ್ಟನ್ — ಅಮೇರಿಕಾದಿಂದ ರಫ್ತಾಗುವ ಅನೇಕ ಪದಾರ್ಥಗಳ ಮೇಲೆ ರಫ್ತು ನಿರ್ಬಂಧ ಸಿದ್ಧ ಆಜ್ಞೆ ತೆಗೆಯಲಾಗಿದೆ.

ವಾಷಿಂಗ್ಟನ್ — ಮಿ || ಮ್ಯಾಕ್ಸ್ ಗಾರ್ಡನರವರು ಬ್ರಿಟನ್ನಿನಲ್ಲಿ ಅಮೇರಿಕಾ ರಾಯಭಾರಿಗಳಾಗಿ ನೇಮಿಸಲ್ಪಟ್ಟಿದ್ದಾರೆ.

ವಾಷಿಂಗ್ಟನ್ — ಅಣು ಶಕ್ತಿಯ ಪ್ರಯೋಗದ 4 ನೇ ವಾರ್ಷಿಕೋತ್ಸವವು ನಡೆಸಲ್ಪಟ್ಟಿತು. ಈ ಸಂದರ್ಭದಲ್ಲಿ ಅನೇಕ ವಿಷಯಗಳನ್ನು ಯುದ್ಧ ಇಲಾಖೆಯವರು ಪ್ರಕಟಿಸಿದ್ದಾರೆ.

ಗೀತಾ ಜಯಂತಿ ಮಹೋತ್ಸವ

(ಸ್ವಂ. ಸು. ತಂತಿ)

ನಿನ್ನೇ ದಿವಸ ಶ್ರೀ ದ್ವಾರಕಾಪೀಠದ ಜಗದ್ಗುರುಗಳು ಶ್ರೀ ಶಂಕರಾಚಾರ್ಯ ಮಹಾರಾಜರವರ ಅಧ್ಯಕ್ಷತೆಯಲ್ಲಿ ಗೀತಾಜಯಂತಿ ಮಹೋತ್ಸವವು ಅತಿ ವೈಭವದಿಂದ ನೆರವೇರಿಸಲ್ಪಟ್ಟಿತು. ಹಲವರ ಭಾಷಣಾನಂತರ ಶ್ರೀಶ್ರೀಗಳವರು ಭಗವದ್ಗೀತೆ ಮತ್ತು ಅದರ ಶಕ್ತಿಗಳ ವಿಷಯವಾಗಿ ಬಹು ಅಮೋಘ ಭಾಷಣ ಮಾಡಿದರು. ನಂತರ ಜಗದ್ಗುರುಗಳವರ 'ನವಭಾರತ' ನೆಂಬ ಗುಜರಾತಿ ವಾರ ಪತ್ರಿಕೆಯ ಪ್ರಾರಂಭೋತ್ಸವವು ನೆರವೇರಿಸಲಾಯಿತು. ಈ ಪತ್ರಿಕೆಯು ರಾಜಕೋಟೆಯಿಂದ ಪ್ರಕಟಿಸಲ್ಪಡುವುದು. ಭಗವಾನ್ ಶ್ರೀ ಕೃಷ್ಣನಿಗೆ ಮಂಗಳಾರತಿಯಾದನಂತರ ಸಮಾರಂಭವು ಮುಕ್ತಾಯವಾಯಿತು.

ವಾಷಿಂಗ್ಟ — ಪೆಸಿಫಿಕ್ ಸಾಗರದ ಭಾಗದಲ್ಲಿ ಎಡನೆ ಯುದ್ಧದಲ್ಲಿ ಮಡಿದ ವೀರರುಗಳ ಜ್ಞಾಪಕಾರ್ಥವಾಗಿ ಆ ಭಾಗಿದಲ್ಲೆಲ್ಲಾ ವೈಜ್ಞಾನಿಕ ಔಟ್‌ಪೋಸ್ಟ್‌ಗಳನ್ನು ಸ್ಥಾಪಿಸುವ ಯೋಜನೆ ಪೂರ್ತಿಗೊಂಡಿದೆ ವಿದ್ಯಾಭ್ಯಾಸೇತ್ಯಾದಿ ವಿಷಯಗಳಿಗನುಕೂಲವಾಗುವಂತೆ ನಿರ್ಮಾಣವಾಗುವುದು.

ಸೂಚನೆ

ಚಂದ್ರಗ್ರಹಣ ವಾರಣೆಯ ಪ್ರಯುಕ್ತ ಸೋಮವಾರ ಪತ್ರಿಕೆ ಪ್ರಕಟವಾಗುವುದಿಲ್ಲ. ಮ್ಯಾನೇಜರ್.

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆಕೂಲಿ ಸೇರಿ 1--12--0

For Quality Printing

L. N. Press

Sriramp.t, MYSORE

Edited, Printed and Published by M. S Krishna Rao at the Satyavadi Press Chamaraj Agrahr Mysore.

At Opera

2nd Houseful Week

Uttami

ಕಾಳಿ ಎಸ್. ರತ್ನ, ಬಿ.ಎಸ್.ದೊರೆರಾಜ್

ಸ್ವಾಮಿ-ನಾರ್ಥ. ಬಿ.ಎಸ್. ಕೃಷ್ಣವೇಣಿ

ರಾಜಾಕಾಂತಂ ವಾತ್ಸವಹಿಸಿರುವ

ಉತ್ತಮಿ

(ತಮಿಳು ಚಿತ್ರ)

At Ranjit_____ From 6-12-46

R-O-Y-A-L M A I L

ಹುಸಿ ಬಾಸು — ಯಶ್ವಂತ ದೇವ್

ವಾತ್ಸವಹಿಸಿರುವರು

ರಾಯಲ್ ಮೇಲ್

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾಪ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಹಿಂದು ಸಂಪಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಭದ್ರ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಶಕ್ತಿ ಸುಧಾ ಸೇವಿಸಿ

ರಕ್ತವೃದ್ಧಿಗೆ, ಧಾತುಪುಷ್ಟಿಗೆ ಸಂಜೀವನ

ನಿಸ್ಸಾರವಾದ, ನತಿಸಿರುವ ದೇಹಕ್ಕೆ ನವಚೈತನ್ಯವನ್ನು ಕೊಡುವುದರಲ್ಲಿ ಅದ್ವಿತೀಯವಾದುದು.

ವಿಳಾಸ — ಶಕ್ತಿಸುಧಾ, 1067 ಚಾಮರಾಜಪುರಂ, ಮೈಸೂರು

SHAKTI SUDHA

For Rich Blood, Strong Nerves & Exuberant Vitality